# ಶಿಕ್ಷಣ –ನಿರ್ಲಕ್ಷ್ಯ ಸಲ್ಲದು

ಜೂನ್ ಮಾಸ ಬಂದಾಗ ........... ಮಕ್ಕಳಿದ್ದ ಎಲ್ಲಾ ಮನೆಗಳಲ್ಲೂ, ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲೂ ಒಂದು ರೀತಿಯ ಸಡಗರ ಸಂಭ್ರಮ. ಈ ಒಂದು ಸಡಗರ, ಸಂಭ್ರಮಕ್ಕೆ ಕಾರಣ? ಮನುಷ್ಯನ ಯಶಸ್ಸಿಗಾಗಿ. ಈ ಎಲ್ಲಾ ಯಶಸ್ಸಿನ ಮೂಲ .......... ಅದನ್ನು ಇಂದಿನ ಮಾನವನು ಅರಿತಿದ್ದಾನೆ. ಅದು ಕೇವಲ ವಿದ್ಯೆಯ ಮೂಲಕ, ಆದುದರಿಂದ ಮಾನವನು ತನ್ನ ಬದುಕಲ್ಲಿ ಯಶಸ್ಸನ್ನು ಸಾಧಿಸಬೇಕಾದರೆ ಆತ ವಿದ್ಯಾವಂತನಾಗಬೇಕು. ಜ್ಞಾನವು ಅಮೂಲ್ಯ, ಅದನ್ನು ಗಳಿಸಿದವರು ಮಹಾ ಭಾಗ್ಯಶಾಲಿಗಳು, ಜ್ಞಾನವಿಲ್ಲದಿದ್ದರೆ ಐಶ್ವರ್ಯ, ಅಧಿಕಾರಗಳು ಅನಾಹುತಕಾರಿಗಳಾಗುತ್ತವೆ. ಪಾಪ ಮತ್ತು ಪತನಕ್ಕೆ ಅವಕಾಶ ನೀಡುತ್ತವೆ. ಆದುದರಿಂದ ಜ್ಞಾನವು ಜೀವನಕ್ಕೊಂದು ಗುರಿ ಮತ್ತು ಬೆಳಕನ್ನು ನೀಡುತ್ತದೆ ಮತ್ತು ನಮ್ಮನ್ನು ಸಂಸ್ಕರಿಸುತ್ತದೆ. ಜ್ಞಾನವನ್ನು ಉಪಯೋಗಿಸಿದಷ್ಟು ಅದು ವೃದ್ಧಿಸುತ್ತದೆ ಆದರೆ ಸಂಪತ್ತನ್ನು ಉಪಯೋಗಿಸಿದಷ್ಟು ಕರಗಿಹೋಗುತ್ತದೆ.

ಈ ಜೂನ್ ತಿಂಗಳು ಪ್ರಾರಂಭವಾಗುತ್ತಲೇ ಎಲ್ಲಾ ಸಮುದಾಯಗಳೂ ತಮ್ಮ ಮಕ್ಕಳ ಭವಿಷ್ಯ ರೂಪಿಸಲು ಬಹಳ ಸ್ಫೂರ್ತಿಯಿಂದ ಬಹಳ ಜಾಗರೂಕತೆಯಿಂದ ಹೆಜ್ಜೆಗಳನ್ನು ಇಡುತ್ತಾರೆ. ಆದರೆ ಈ ಸ್ಫೂರ್ತಿ, ಸಡಗರ, ಮುಸ್ಲಿಂ ಸಮುದಾಯದ ಅರ್ಧದಷ್ಟು ಮಂದಿಯಲ್ಲಿ ಈಗಲೂ ನಾವು ಕಾಣಲು ಸಾಧ್ಯವಿಲ್ಲ. ಇತರ ಸಮುದಾಯಗಳಿಗಿಂತ ಮುಸ್ಲಿಮರು ಶೈಕ್ಷಣಿಕ ರಂಗದಲ್ಲಿ ಹಿಂದುಳಿಯಲು ಕಾರಣವೇನು? ಈ ಬಗ್ಗೆ ಗಂಭೀರವಾಗಿ ಆಲೋಚಿಸದೆ ಅಲಕ್ಷ್ಯದಿಮದ ಮುಸ್ಲಿಂ ಸಮುದಾಯ ಕೆಲವು ಕಾಲದಿಂದ ನಿದ್ದೆ ಮಾಡಿತ್ತು. ಅದರ ಪರಿಣಾಮವನ್ನು ನಾವಿಂದು ಕಾಣುತ್ತಿದ್ದೇವೆ. ನಮ್ಮ ಭಾರತ ದೇಶದಲ್ಲಿ ಅತ್ಯಂತ ಕೆಳವರ್ಗ ಎಂದು ಗುರುತಿಸಲ್ಪಡುವ ವರ್ಗಕ್ಕಿಂತಲೂ ನಮ್ಮ ಸಮುದಾಯ ವಿದ್ಯೆಯಲ್ಲಿ ಹಿಂದೆ ಇದೆ.

ನಿಜವಾಗಿಯೂ ನಮ್ಮ ಮುಸ್ಲಿಂ ಸಮುದಾಯದ ಬಗ್ಗೆ ನಾಮೊಮ್ಮೆ ಪ್ರವಾದಿ (ಸ.ಅ.)ರ ಹದೀಸನ್ನು ತೆಗೆದು ಅಧ್ಯಯನ ನಡೆಸಿದರೆ ಪವಿತ್ರ ಕುರಾನನ್ನು ಅವಲೋಕಿಸಿದರೆ. ನಮಗೆ ಅಲ್ಲೊಂದು ಮುಸ್ಲಿಂ ಸಮುದಾಯದ ಪರಿಚಯವಾಗುತ್ತದೆ. ಅಲ್ಲಿ ನಮಗೆ ವರ್ಣನೆ ಸಿಗುವುದು ಅರೆಬರೆ ಜ್ಞಾನವಿರುವ ಅಥವಾ ಅವಿದ್ಯಾವಂತ ಸಮುದಾಯವಲ್ಲ ಬದಲಾಗಿ "ಕುನ್‌ತುಮ್ ಖೈರ ಉಮ್ಮತ್" ಅರ್ಥಾತ್ ನೀವು ಶ್ರೇಷ್ಠ ಸಮುದಾಯವಾಗಿದ್ದೀರಿ, ನೀವು ಜಗತ್ತಿನಲ್ಲೆ ಜ್ಞಾನವಿರುವ ಎಲ್ಲರಿಗೂ ಮಾರ್ಗದರ್ಶನ ನೀಡಬೇಕಾದ ಉತ್ತಮ ಸಮುದಾಯವಾಗಿದ್ದೀರಿ ಎಂದು.

ಜ್ಞಾನಾರ್ಜನೆಯನ್ನು ಕುರಿತಂತೆ ಇಸ್ಲಾಮ್ ಧರ್ಮವು ವ್ಯಾಪಕ ಹಾಗೂ ಪ್ರತಿಶೀಲ ಧೋರಣೆಗಳನ್ನು ಹೊಂದಿದೆ. ಇಸ್ಲಾಮ್ ಧರ್ಮದ ವಿಧೀ–ನಿಷೇಧಗಳ ಕುರಿತಂತೆ ಪ್ರವಾದಿ ಮುಹಮ್ಮದ್ (ಸ)ರ ನುಡಿಯೊಂದು ಈ ರೀತಿ ಇದೆ – "ಜ್ಞಾನಾರ್ಜನೆಗಾಗಿ ವ್ಯಾಸಂಗದಲ್ಲಿ ತೊಡಗುವುದು ಪ್ರತಿಯೊಬ್ಬ ಮುಸಲ್ಮಾನ್ ಸ್ತ್ರೀ ಪುರುಷರ ಕರ್ತವ್ಯವೆನಿಸಿದೆ" ಆದರೆ ಯಾವ ಸಮುದಾಯವನ್ನು ಅಲ್ಲಾಹನು ಜ್ಞಾನಿಗಳ ಸಮುದಾಯ ಎಂದು ಹೇಳಿದನೋ ಶತಮಾನಗಳವರೆಗೆ ಜಗತ್ತಿನಲ್ಲಿ ಗುರುತಿಸಲ್ಪಟ್ಟಿದ್ದ ಒಂದು ಬಲಿಷ್ಠವಾದ ಸಮುದಾಯ ಇಂದು ಜ್ಞಾನದಲ್ಲಿ ಶಿಕ್ಷಣದಲ್ಲಿ ಅತ್ಯಂತ ಹಿಂದುಳಿದ ವರ್ಗವಾಗಿ ಮಾರ್ಪಟ್ಟಿದೆ. ಸರಕಾರಿ ಉದ್ಯೋಗಗಳಲ್ಲಿ ಅಲ್ಪಸಂಖ್ಯಾತರಿಗೆ ಇಂತಿಷ್ಟು ಉದ್ಯೋಗ ಮೀಸಲಾತಿ ಎಂದು ಇದ್ದರೂ ಅದನ್ನು ಗಳಿಸುವ ಅರ್ಹತೆ ಇಲ್ಲದ ಸಮುದಾಯ ನಮ್ಮದಾಗಿದೆ ಯಾಕೆ?

ಒಂದು ಕಾಲದಲ್ಲಿ ಜಗತ್ತಿಗೆ ವಿಜ್ಞಾನದ ಬೆಳಕನ್ನು ನೀಡಿದ ಸಮುದಾಯ ನಮ್ಮದು. ಜಗತ್ತು 600 ವರುಷಗಳ ವರೆಗೆ ಯುರೋಪಿನ ವಿಶ್ವವಿದ್ಯಾಲಯಗಳಲ್ಲಿ ಅವರು ವಿದ್ಯೆ ಗಳಿಸಲು ಉಪಯೋಗಿಸುತ್ತಿದ್ದ ಪುಸ್ತಕಗಳು ಖ್ಯಾರ ಮುಸ್ಲಿಮ್ ವಿಸ್ವಾಂಸರು ರಚಿಸಿದ್ದಾಗಿತ್ತು. ಇದನ್ನು ನಾವು ಮುಸ್ಲಿಮರು ಹೇಳುವುದಲ್ಲ ಬದಲಾಗಿ ಪಾಶ್ಚಾತ್ಯ ಬುದ್ಧಿ ಜೀವಿಗಳೇ ಹೇಳುತ್ತಾರೆ. ಖ್ಯಾತ ವಿದ್ವಾಸರುಗಳಾದ ಇಬ್ನುನೀನಾ ಎಂಬವರು ಕಾನೂನು ಫಿಲ್‌ತಿಬ್, ಇಮಾಮ್ ರಾಜೀ ಎಂಬವರು ಕಿತಾಬುಲ್ ಹಾವಿ ಎಂಬ ಗ್ರಂಥಗಳನ್ನು ನರೆದರು. ಈ ಎರಡು ಗ್ರಂಥಗಳು ಜಗತ್ತಿಗೆ ವೈದ್ಯಕೀಯ ವಿಜ್ಞಾನವನ್ನು ಪರಿಚಯ ಪಡಿಸಿದ ಗ್ರಂಥಗಳಾಗಿದ್ದವು. ಈ ಗ್ರಂಥಗಳ ಆಧಾರದಲ್ಲಿ ಕ್ರೈಸ್ತ ಸಮುದಾಯವು ಇಮದು ವೈಜ್ಞಾನಿಕವಾಗಿ ಬಹಳ ಮುಂದುವರಿದಿದೆ. ಪ್ರವಾದಿ (ಸ.ಅ.)ರ ಕಾಲದಲ್ಲಿ ಮನುಷ್ಯರಿಗೆ ರೋಗ ಬಂದಾಗ ಅದು ಅವನ ಪಾಪದ ಫಲ, ಅದಕ್ಕೆ ಮದ್ದು ಮಾಡಬೇಕಾದ ಅಗತ್ಯವಿಲ್ಲ ಎಂದು ಯಹೂದಿ, ಕ್ರೈಸ್ತ ಜನಾಂಗ ಹೇಳುತ್ತಿದ್ದಾಗ ಪ್ರವಾದಿಯವರ ಅನುಯಾಯಿಗಳು ಎಲ್ಲಾ ರೋಗಗಳಿಗೂ ಮದ್ದಿದೆ–ಲಿಕುಲ್ಲಿದಾಇನ್‌ದವಾಲ್ ಎಂಬ ಕುರ್‌ಆನ್, ಹದೀಸ್‌ಗಳ ಆಧಾರದಲ್ಲೇ ವೈಜ್ಞಾನಿಕವಾಗಿ ಸಂಶೋಧನೆ ನಡೆಸುತ್ತಾ ಅಭಿವೃದ್ಧಿ ಸಾಧಿಸಿದರು.

ರೋಗಿಗಳನ್ನು ಒಮದು ಕಡೆ ಮಲಗಿಸಿ ಅವರಿಗೆ ಚಿಕಿತ್ಸೆ ಮಾಡುವ ಆಸ್ಪತ್ರೆ ಎಂಬ ಒಂದು ವ್ಯವಸ್ಥೆ ಮುಸ್ಲಿಮ್ ಜಗತ್ತಿಗೆ ಪರಿಚಯಿಸಿ 800 ವರುಷಗಳ ನಂತರ ಪಾಶ್ಚಾತ್ಯ ಜಗತ್ತಿನಲ್ಲಿ ಆಸ್ಪತ್ರೆಗಳು ಅಸ್ತಿತ್ವಕ್ಕೆ ಬಂದವು. ಅಮಾನವೀಯ ಆಡಳಿತ ಕಾಲದಲ್ಲಿ ನಡೆದ "ಶಿಲುಬೆ ಯುದ್ಧ"ದ ಸಂದರ್ಭದಲ್ಲಿ ಕ್ರೈಸ್ತ ಸೈನಿಕರಿಗೆ, ಮುಸ್ಲಿಮರಿಗೆ ಆಸ್ಪತ್ರೆಯೆಂಬ ಒಂದು ವ್ಯಸ್ಥೆ ಇದೆ. ಅದು ನಮಗೂ ಬೇಕು ಎಂದು ಮನದಟ್ಟಾಯಿತು. ಶಸ್ತ್ರ ಚಿಕಿತ್ಸೆಯ ಮೂಲಕ ಒಬ್ಬ ರೋಗಿಯ ರೋಗವನ್ನು ಗುಣಪಡಿಸಬಹುದು ಎಂದು ಇಂದಿನ ವೈದ್ಯ ವಿಜ್ಞಾನ ಹೇಳುವುದಾದರೆ ಈ ಶಸ್ತ್ರಕ್ರಿಯೆ ಎಂಬ ವ್ಯವಸ್ಥೆಯನ್ನು ಜಗತ್ತಿಗೆ ಪರಿಚಯ ಪಡಿಸಿದ್ದು ಝುಹ್‌ರಾವೀ ಎಂಬ ಮುಸ್ಲಿಮ್ ವಿದ್ವಾಂಸರಾಗಿದ್ದರು.

ಪವಿತ್ರ ಕುರ್‌ಆನ್‌ನಲ್ಲಿ ಸೂರ್ಯ ಚಲಿಸುತ್ತದೆ ಎಂಬ ವೈಜ್ಞಾನಿಕ ಸತ್ಯವನ್ನು ಜಗತ್ತಿಗೆ ಸೂರಃ ಯಾಸೀನ್‌ನಲ್ಲಿ ಸಾರಿದೆ. (ವಶ್ಶಂಶು ತಜ್‌ರೀ). ಈ ಸತ್ಯವನ್ನು ಶೋಧಿಸಿ ಗೆಲಿಲಿಯೋ ಎಂಬ ವಿಜ್ಞಾನಿ ಸೂರ್ಯನು ನಿಜವಾಗಿಯೂ ಚಲಿಸುತ್ತಾನೆ ಎಂದು ಹೇಳಿದಾಗ ಅವನ ಸಮುದಾಯದವರೇ ಅವನನ್ನು ಸುಟ್ಟು ಭಸ್ಮ ಮಾಡಿದರು, ಯಾಕೆಂದರೆ ಅವರ ಪ್ರಕಾರ ಗೆಲಿಲಿಯೋ ಹೇಳಿದ್ದು ಅವರ ಧರ್ಮಕ್ಕೆ ವಿರೋಧವಾಗಿತ್ತು.

ಹತ್ತನೆ ಶತಮಾನದಲ್ಲಿ ಮುಸ್ಲಿಂ ಸಮುದಾಯಕ್ಕೆ ಈಜಿಪ್ಟ್‌ನಲ್ಲಿ 20 ಲಕ್ಷ ಪುಸ್ತಕಗಳಿದ್ದಂತಹ ಬೃಹತ್ ವಾಚನಾಲಯ ಇತ್ತು. ಈ ಬೃಹತ್ ವಾಚನಾಲಯವನ್ನು ನೋಡಿ ಅಂದಿನ ಪೋಪ್ ಧರ್ಮಗುರು "ಮುಸ್ಲಿಮರ ಈ ವಾಚನಾಲಯಕ್ಕೆ ಕಾವಲು ಕಾಯುವ ಅರ್ಹತೆ ಕೂಡಾ ನಮ್ಮ ಕ್ರೈಸ್ತ ಜನಾಂಗಕ್ಕಿಲ್ಲದೆ ಹೋಯ್ತು" ಎಂದು ಹೇಳಬೇಕಾದರೆ, ಅಂತಹ ಉನ್ನತ ಜ್ಞಾನಿಗಳ ಸಮುದಾಯದವರು ನಾವು ಎಂದುಕೊಂಡು ಈಗಲಾದರೂ ವಿದ್ಯೆಯ ಮಹತ್ವವನ್ನು ಅರಿಯಬೇಕಾಗಿದೆ. ಈ ವಿದ್ಯೆಯಿಂದಲೇ ನಮಗೆ ಹರಾಮ್–ಹಲಾಲ್‌ಗಳ ವ್ಯತ್ಯಾಸವೂ ತಿಳಿಯುವುದು.

ಜ್ಞಾನದ ಮಹತ್ವವನ್ನು ತಿಳಿದವರು ಅದಕ್ಕೆ ಅಧಿಕ ಪ್ರಾಮುಖ್ಯತೆ ನೀಡುತ್ತಾರೆ. ಸಲ್ಜೂರ ಆಡಳಿತಗಾರರಾಗಿದ್ದ "ಮಾಲಿಕ್‌ಶಾ"ರು ತಮ್ಮ ರಾಜ್ಯ ವ್ಯವಹಾರಗಳ ಮಂತ್ರಿಯಾಗಿ "ನಝಾಮುಲ್ ಮುಲ್ಕ್ ತೂಸಿ"ಯವರನ್ನು ನೇಮಿಸಿದ್ದರು. ಅವರು ಸಾರ್ವಜನಿಕ ಸಂಪತ್ತಿನ ಸಿಂಹಪಾಲನ್ನು ಶೈಕ್ಷಣಿಕ ಅಗತ್ಯಗಳ ಪೂರೈಕೆಗಾಗಿ ವ್ಯಯಿಸುತ್ತಿದ್ದರು. ಅದಕ್ಕಾಗಿ ಒಮ್ಮೆ "ಮಾಲಿಕ್ ಶಾ"ರು ನಝಾಮುದ್ದೀನ್ ರೊಡನೆ ಹೇಳಿದರು – "ನೀವು ಶಿಕ್ಷಣಕ್ಕಾಗಿ ವ್ಯಯಿಸುವ ಹಣವನ್ನು ಸೈನಿಕ ಅಗತ್ಯಗಳಿಗಾಗಿ ವ್ಯಯಿಸುತ್ತಿದ್ದರೆ. ಇಡೀ ಜಗತ್ತನ್ನು ನಾವೇ ಅಧೀನ ಪಡಿಸಬಹುದಾಗಿತ್ತು". ಆಗ ಸಚಿವ ನಝಾಮುದ್ದೀನ್ ಮುಲ್ಕ್ ಹೀಗೆಂದರು "ನೀವು ಸಜ್ಜು ಗೊಳಿಸುವ ಸೈನಿಕರ ಅಸ್ತ್ರಗಳು ಸ್ವಲ್ಪ ದೂರ ಮಾತ್ರ ತಲುಪಬಹುದು. ಆದರೆ ನಾನು ಸಜ್ಜುಗೊಳಿಸುವ ಪಂಡಿತ ಸೇನೆಯ "ಜ್ಞಾನ"ವೆಂಬ ಅಸ್ತ್ರಗಳು ದಿಗಂತವನ್ನೂ ಭೇದಿಸಿ ಮುಂದೆ ಸಾಗುವ ಸಾಮರ್ಥ್ಯವನ್ನು ಹೊಂದಿವೆ". ಎಂದು ಹೇಳಿದ್ದರೆ – ಅವರ ಮಾತಿನ ಹಿಂದಿರುವ ಅರ್ಥ – ಮನುಷ್ಯನ ಅಂತರಂಗದಲ್ಲಿ ಅಡಗಿದ ಸೃಷ್ಟಿಕರ್ತನ ಕಿಡಿಯನ್ನು ಅರಿವಿಗೆ ತಂದುಕೊಳ್ಳಲು ಅಸಮರ್ಥನಾದರೆ ಆತ ಅಧಃಪತನದತ್ತ ಸಾಗಿದಂತೆ. ಹಾಗಾಗದಂತೆ ಮನುಷ್ಯನನ್ನು ಭೋಗ, ಮೋಹ, ಧನದಾಹ ಅಧಿಕಾರದಾಹದಿಂದ ಮೇಲಕ್ಕೆತ್ತಿ ಅವನ ವ್ಯಕ್ತಿತ್ವದ ದೈವಿಕತೆಯನ್ನು ಅರಳಿಸಲು ಶಿಕ್ಷಣ ಸಹಾಯಕವಾಗಬೇಕು. ನಮ್ಮ ಜೀವನಕ್ಕೆ ಒಂದು ಉದ್ದೇಶವಿದೆ. ಆ ಉದ್ದೇಶವನ್ನು ಸಾಕ್ಷಾತ್ಕರಿಸಿಕೊಂಡು ಜೀವನವನ್ನು ಸುಧಾರಣೆ ಮಾಡಿಕೊಳ್ಳುವುದೂ ಶಿಕ್ಷಣದ ಉದ್ದೇಶ. ಅಂತೆಯೇ ವಿಶ್ವವಿದ್ಯಾಲಯಗಳು ವಿದ್ಯಾರ್ಥಿಯ ಬೌದ್ಧಿಕತೆಯನ್ನು ಬೆಳೆಸಲು ಭಾವನಾತ್ಮಕತೆಯಲ್ಲಿ ಉದಾತ್ತತೆಯನ್ನು ಸಾಧಿಸಲು, ಉತ್ತಮ ಸಂಸ್ಕಾರವನ್ನು  ಅರಳಿಸಲು ಮೀಸಲಾಗಿರಬೇಕಾದ ಕ್ಷೇತ್ರ. ಅದಲ್ಲದೆ ಎಲ್ಲಾ ಧರ್ಮಗಳೂ ಅತ್ಯಂತ ಆದಲ್ಲಿ ಒಂದೇ ಉದ್ದೇಶವನ್ನು ಹೊಂದಿದೆ. ಉತ್ತಮ ಮಾನವನಾಗಲು ಹೃದಯ ಸಂಸ್ಕಾರವೂ ಮುಖ್ಯ. ಹೃದಯ ಸಂಸ್ಕಾರವು ನೀತಿ ಪ್ರಜ್ಞೆಯಿಂದ ಉತ್ಪನ್ನವಾಗುತ್ತದೆ. ಹಾಗಾಗಿ ನೀತಿಪ್ರಜ್ಞೆಯಿಲ್ಲದ ವಿದ್ಯಾಭ್ಯಾಸವು ಸೂಕ್ತವಲ್ಲ, ಇಲ್ಲವಾದಲ್ಲಿ ಲೋಕ ಜ್ಞಾನವಿಲ್ಲದ ಪಂಡಿತರೂ ಮತ್ತು ಧರ್ಮದ ಗಂಧಗಾಳಿಯೂ ಸೋಂಕದ ಪದವೀಧರರು ಸೃಷ್ಟಿಯಾಗುತ್ತಾರೆ. ಈ ಎರಡೂ ವರ್ಗದ ವಿದ್ಯಾವಂತರು ಇಸ್ಲಾಮೀ ಸಮಾಜದ ಮಟ್ಟಿಗೆ ಅಪಾಯಕಾರಿಗಳಾಗಿರುವುದು. ಆಧುನಿಕ ವಿಜ್ಞಾನ, ತಂತ್ರಜ್ಞಾನಗಳ ಮೂಲಭೂತ ವಿಷಯಗಳನ್ನು ಕಲಿಸದ ದಾರುಲ್ ಉಲೂಮ್‌ಗಳೂ ಮತ್ತು ಕುರ್‌ಆನ್ ಹದೀಸ್‌ಗಳ ಜ್ಞಾನ ನೀಡದ ಕಾಲೇಜು, ವಿಶ್ವವಿದ್ಯಾಲಯಗಳು ಇಸ್ಲಾಮಿನ ದೃಷ್ಟಿಯಲ್ಲಿ ಅರೆ ವೈದ್ಯರನ್ನು ಸೃಷ್ಟಿಸುವ ಕೇಂದ್ರಗಳು **An all round drawing of the best in child and man – body, mind and spirit** (ಬೌದ್ಧಿಕ– ಧಾರ್ಮಿಕ ಶಾರೀರಿಕ ಈ ಎಲ್ಲಾ ಗುಣಗಳ ಸರ್ವಾಂಗೀಣ ವ್ಯಕ್ತಿತ್ವ ಉನ್ನತಿಯನ್ನು ಸಾಧಿಸುವುದೇ ಶಿಕ್ಷಣ) ಮಾನವೀಯತೆಯನ್ನು ಬೆಳೆಸುವ ನೀತಿ ಶಿಕ್ಷಣ ಆಧುನಿಕ ಜಗತ್ತಿಗೆ ಪೂರಕವಾದ ಉದ್ಯೋಗ ಶಿಕ್ಷ, ಉನ್ನತ ಮಟ್ಟದ ಬೌದ್ಧಿಕತೆಯನ್ನು ಬೆಲೆಸುವ ಕಾಲೇಜು ಶಿಕ್ಷಣ, ಸಾರ್ವಜನಿಕ ಕಡ್ಡಾಯ ಶಿಕ್ಷಣ, ಹಿಂದುಳಿದವರಿಗೆ ಶಿಕ್ಷಣ ಪಡೆಯಲು ಪ್ರೋತ್ಸಾಹ.

ಈ ಹಿನ್ನೆಲೆಯಲ್ಲಿ ಒಟ್ಟು ಸಮಾಜಕ್ಕೆ ಮತ್ತು ವಿಶೇಷವಾಗಿ ಮುಸ್ಲಿಂ ಸಮಾಜಕ್ಕೆ ಅದರ ಪ್ರಚಲಿತ ಶೈಕ್ಷಣಿಕ ಸ್ಥಿತಿಯನ್ನು ನೆನಪಿಸಿಕೊಡಬೇಕಾಗಿದೆ, ಶೈಕ್ಷಣಿಕ ಕ್ಷೇತ್ರವನ್ನು ಕಡೆಗಣಿಸುವುದರ ಘೋರ ದುಷ್ಪರಿಣಾಮಗಳ ಬಗ್ಗೆ ಎಚ್ಚರಿಸಬೇಕಾಗಿದೆ. ಶಿಕ್ಷಣಕ್ಕೂ ಪ್ರಗತಿಗೂ ಇರುವ ಸಾಮ್ಯತೆಯನ್ನು ಜನರಿಗೆ ಮನವರಿಕೆ ಮಾಡಿನಬೇಕಾದ ಅಗತ್ಯವಿದೆ. ಹಾಗೆಯೇ ಸಮುದಾಯವು ತನ್ನ ಚಿಂತನೆ ಮತ್ತು ಶ್ರಮಗಳನ್ನು ಈ ಕ್ಷೇತ್ರದಲ್ಲಿ ತೊಡಗಿಸುವಂತೆ ಪ್ರೋತ್ಸಾಹ ನೀಡಬೇಕಾದುದೂ ಅಗತ್ಯವಿದೆ.

ಕುಲ್ಸೂಮ್ ಅಬೂಬಕ್ಕರ್
ಉಡುಪಿ